





ಗುಂಡ: (ವಾಟ್ಸ್‌ಆ್ಯಪ್‌ನಲ್ಲಿ ಮೆಸೇಜ್ ಹಾಕಿದ) ಹಕ್ಕಿಯ ಹಾಗೇ ಆಕಾಶದಲ್ಲಿ ಹಾರಾಡುವ ಆಸೆ.
ಮೀನಾಕ್ಷಿ: (ಅದಕ್ಕೆ ಪ್ರತಿಕ್ರಿಯಿಸಿದಳು) ಸರಿ ಸರಿ ಭೂಮಿ ಮೇಲೆ ಕಾಲಿಟ್ಟಾಗ ಮರೆಯದೇ ಕರಿಬೇವಿನ ಸೊಪ್ಪು ತಗೊಂಡು ಬನ್ನಿ.

ಜೈಲರ್: ನಾಳೆ ನಿನಗೆ ಗಲ್ಲು ಶಿಕ್ಷೆ. ಕೊನೆ ಆಸೆ ಏನಾದರೂ ಇದ್ದರೆ ಹೇಳು.
ಖೈದಿ: ನನ್ನ ಮಕ್ಕಳನ್ನು ನೋಡಬೇಕು ಸರ್.
ಜೈಲರ್: ಸರಿ, ಅವರು ಎಲ್ಲಿದ್ದಾರೆ? ಅಡ್ರೆಸ್ ಹೇಳು?
ಖೈದಿ: ನನಗೆ ಇನ್ನೂ ಮದುವೇನೆ ಆಗಿಲ್ಲ ಸರ್.

ತನ್ನ ತೋರು ಬೆರಳನ್ನು ಗಂಡನ ಕಡೆ ತೋರಿಸಿದ ಹೆಂಡತಿಯನ್ನು ಕಂಡ ಪಾಪದ ಗಂಡ ಕೂಡಲೇ ಅವಳೆಡೆಗೆ ಬಂದು ಕೇಳಿದ.
ವಿಶ್ವ: ಏನೇ ವಿಶಾಲೂ, ಯಾಕೆ ನನ್ನ ಕರೆದೆ?
ವಿಶಾಲು: ಸುಮ್ಮನೆ ರೀ... ನನ್ನ ಈ ತೋರು ಬೆರಳಿನ ಶಕ್ತಿ ಎಷ್ಟಿದೆ ಎಂದು ಪರೀಕ್ಷೆ ಮಾಡಿದೆ.

ಹೆಂಡತಿ: ವೆಲ್ಡಿಂಗ್ ಮತ್ತು ವೆಡ್ಡಿಂಗ್ ನಡುವಿನ ವ್ಯತ್ಯಾಸವೇನು?
ಗಂಡ: ಕಿಡಿ ಹಾರಿದ ನಂತರ ಶಾಶ್ವತ ಜೋಡಣೆಯಾಗುವ ಕ್ರಿಯೆಯೇ ವೆಲ್ಡಿಂಗ್. ಮೊದಲು ಜೋಡಣೆಯಾಗಿ ಜೀವನ ಪೂರ್ತಿ ಕಿಡಿಕಾರುವ ಕ್ರಿಯೆಯೇ ವೆಡ್ಡಿಂಗ್.

ಸೀನ: ನೀನು ದೇವತೆಯಂತೆ ಕಾಣ್ತಿದ್ದೀಯ.
ಮೀನಾ: ಮತ್ತೆ, ಮುಖ ಏನ್ ನೋಡ್ತಿ, ನಮಸ್ಕಾರ ಮಾಡಿ ಕಾಣಿಕೆ ಹಾಕಿ ಮುಂದೆ ಹೋಗು. ಕ್ಯೂನಲ್ಲಿ ಭಕ್ತರು ಜಾಸ್ತಿ ಇದಾರೆ.

ಸೋಮಣ್ಣ: ಹುಡುಗಿಗೆ ಮದುವೆ ದಿನ ಏನೇನು ಹಾಕುತ್ತೀರಿ?
ರಾಮಣ್ಣ: ಲಿಪ್‌ಸ್ಟಿಕ್, ಕೈಗಳಿಗೆ ಗೋರಂಟಿ, ಕೆನ್ನೆಗೆ ಫೇಸ್‌ಪ್ಯಾಕ್, ತಲೆ ಕೂದಲಿಗೆ ಹೇರ್ ಡೈ ಹಾಕ್ತೀವಿ. ಸಾಕಾ ಇನ್ನೇನಾದ್ರೂ ಬೇಕಾ?

ರತ್ನ: ಹಬ್ಬಕ್ಕೆ ಶಾಪಿಂಗ್ ಲಿಸ್ಟ್ ಮಾಡ್ಲಾ?
ವೆಂಕಿ: ಸರಿ ಮಾಡು.
ರತ್ನ: ಮೊದಲು ಏನು ತಗೊಳ್ಳೋಣ?
ವೆಂಕಿ: ಸಾಲ.

ಮೇಷ್ಟ್ರು: ಎಕ್ಸಾಂ ಹಾಲ್‌ಗೆ ಈ ವಿಸ್ಕಿ ಬಾಟಲ್‌ನ ಯಾಕೆ ತಂದೆ?
ಮಂಕ: ಪರೀಕ್ಷೆಯಲ್ಲಿ ಮಿನಿಮಮ್ ನೈಂಟಿ ತಗೋಬೇಕಂತ ನೀವೇ ಹೇಳಿದ್ರಲ್ಲ ಸರ್.

ಎಲೆಕ್ಷನ್ ಆಫೀಸರ್: ಬೂತ್ ಒಳಗೇ ನಿಂತು ಏನ್ ಯೋಚನೆ ಮಾಡ್ತಿದ್ದೀರಾ? ಬೇಗ ವೋಟ್ ಮಾಡಿ ಹೊರಗೆ ಬನ್ನಿ.
ಗುಂಡ: ಸ್ವಲ್ಪ ತಡೀರಿ ಸರ್, ನಿನ್ನೆ ರಾತ್ರಿ ನನಗೆ ಎಣ್ಣೆ ಕೊಡಿಸಿದ ಪಾರ್ಟಿ ಯಾವುದು ಅನ್ನೋದೇ ಮರೆತಿದೆ. ಅದನ್ನು ನೆನಪು ಮಾಡ್ಕೊತಾ ಇದೀನಿ.

ಮಾಜಿ ಪ್ರೇಯಸಿಯ ಮದುವೆಗೆ ಹೋದ ಪ್ರೇಮ್‌ನನ್ನು ಹುಡುಗಿಯ ತಂದೆ ಹೀಗೆ ಕೇಳಿದರು.
ತಂದೆ: ತಾವು ಯಾರು ಅಂತಾ ಗೊತ್ತಾಗಲಿಲ್ಲ?
ಪ್ರೇಮ್: ಫೈನಲ್‌ನಲ್ಲಿ ಸೋತವನು. ಈಗ ಸಂಭ್ರಮಾಚರಣೆ ನೋಡಲು ಬಂದಿದ್ದೇನೆ.

ಸಂಗ್ರಹ: ಆರ್. ವೀರೇಶ್ ಕುಮಾರ್, ಬೆಂಗಳೂರು